**Prajavani, Bangalore – 28.7.11**

# ಟಿಸಿಎಸ್ ರಸಪ್ರಶ್ನೆ: ಸೇಂಟ್ ಪಾಲ್ಸ್ ಪ್ರಥಮ

ಪ್ರಜಾವಾಣಿ ವಾರ್ತೆ




ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಟಿಸಿಎಸ್ ಐಟಿ ವಿಜ್ 2011' ರಸಪ್ರಶ್ನೆ ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಸೇಂಟ್ ಪಾಲ್ಸ್ ಇಂಗ್ಲಿಷ್ ಶಾಲೆಯ ವಿದ್ಯಾರ್ಥಿಗಳಾದ ಪ್ರತೀಕ್ ಮತ್ತು ಅರುಲ್ ಪ್ರಕಾಶ್ ಅವರಿಗೆ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಪ್ರಶಸ್ತಿ ನೀಡಿ ಸನ್ಮಾನಿಸಿದರು. ಟಿಸಿಎಸ್ ಉಪಾಧ್ಯಕ್ಷ ನಾಗರಾಜ್ ಐಜರಿ, ಕ್ವಿಜ್ ಮಾಸ್ಟರ್ ಗಿರಿ ಬಾಲಸುಬ್ರಹ್ಮಣ್ಯ ಇದ್ದಾರೆ – ಪ್ರಜಾವಾಣಿ ಚಿತ್ರ

ಬೆಂಗಳೂರು: ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಟಿಸಿಎಸ್ ಐಟಿ ವಿಜ್ 2011' ರಸಪ್ರಶ್ನೆ ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಸೇಂಟ್ ಪಾಲ್ಸ್ ಇಂಗ್ಲಿಷ್ ಶಾಲೆಯ ವಿದ್ಯಾರ್ಥಿಗಳಾದ ಐ.ಪ್ರತೀಕ್ ಮತ್ತು ಅರುಲ್ ಪ್ರಕಾಶ್ ಪ್ರಥಮ ಬಹುಮಾನ ಗಳಿಸಿದರು. ಇವರು ರಾಷ್ಟ್ರೀಯ ಮಟ್ಟದ ಅಂತಿಮ ಹಣಾಹಣಿಯಲ್ಲಿ ಬೆಂಗಳೂರನ್ನು ಪ್ರತಿನಿಧಿಸಲಿದ್ದಾರೆ.

ಫ್ರಾಂಕ್ ಅಂಥೋಣಿ ಪಬ್ಲಿಕ್ ಶಾಲೆಯ ಸಿ.ಎಸ್.ಜಯದೇವ್ ಮತ್ತು ಕೆ.ಪ್ರಣವ್ ರನ್ನರ್ ಅಪ್ ಸ್ಥಾನ ಪಡೆದರು. ವಿಜೇತರಿಗೆ ಪ್ರಶಸ್ತಿ ನೀಡಿ ಮಾತನಾಡಿದ ಕ್ರಿಕೆಟಿಗ ಜಾವಗಲ್ ಶ್ರೀನಾಥ್ , 'ಪ್ರತಿಭಾನ್ವಿತ ವಿದ್ಯಾರ್ಥಿಗಳು ದೇಶದ ಭವಿಷ್ಯದ ತಳಹದಿಯಾಗಿದ್ದಾರೆ. ಭಾರತ ಸುರಕ್ಷಿತ ಭವಿಷ್ಯ ಹೊಂದಿದೆ ಎಂಬುದು ವಿದ್ಯಾರ್ಥಿಗಳ ಬುದ್ಧಿಮತ್ತೆಯಿಂದ ತಿಳಿದು ಬಂದಿದೆ. ಸ್ಪರ್ಧೆಯ ಅನೇಕ ಪ್ರಶ್ನೆಗಳು ಕ್ಲಿಷ್ಟಕರವಾಗಿದ್ದವು. ಒಟ್ಟಾರೆ ಸ್ಪರ್ಧೆ ಆಹ್ಲಾದಕರ ಅನುಭವ ನೀಡಿತು' ಎಂದರು.

ಟಿಸಿಎಸ್ ಉಪಾಧ್ಯಕ್ಷ ನಾಗರಾಜ್ ಐಜರಿ, 'ಯುವ ಜನರಿಗೆ ತಂತ್ರಜ್ಞಾನ ಪರಿಚಯಿಸಲು ಇದೊಂದು ಉತ್ತಮ ವೇದಿಕೆ. ಮಕ್ಕಳು ತರಗತಿಯಿಂದ ಹೊರಗೆ ಕಲಿಯಲು ರಸಪ್ರಶ್ನೆ ಅತ್ಯುತ್ತಮ ವಿಧಾನ. ರಾಷ್ಟ್ರಮಟ್ಟದಲ್ಲಿ ಬೆಂಗಳೂರು ವಿದ್ಯಾರ್ಥಿಗಳು ದಾಖಲೆ ಸ್ಥಾಪಿಸಲಿದ್ದಾರೆ' ಎಂದು ಆಶಾಭಾವ ವ್ಯಕ್ತಪಡಿಸಿದರು. ಅಂತಿಮ ಸುತ್ತಿಗೆ ಆಯ್ಕೆಯಾದ 6 ತಂಡಗಳಿಗೂ ಟಿಸಿಎಸ್‌ನಿಂದ ಟ್ರಾವೆಲ್ ಬ್ಯಾಗ್, ಹೆಡ್‌ಫೋನ್, ಪೋರ್ಟಬಲ್ ಸ್ಪೀಕರ್, ಯುಎಸ್‌ಬಿ ಪೆನ್‌ಡ್ರೈವ್, ಲೇಸರ್ ಪಾಯಿಂಟರ್, ದಿ ವೀಕ್ ಗಿಫ್ಟ್ ಪ್ಯಾಕ್‌ಗಳು ಬಹುಮಾನವಾಗಿ ಲಭಿಸಿತು. ಕ್ವಿಜ್‌ನಲ್ಲಿ ಪ್ರೇಕ್ಷಕರು ಬ್ಯಾಕ್ ಪ್ಯಾಕ್, ಪೆನ್‌ಡ್ರೈವ್, ಮಿನಿ ಪೋರ್ಟಬಲ್ ಸ್ಪೀಕರ್, ಡಿನ್ನರ್ ಕೂಪನ್ ಮತ್ತು ಟೀ ಶರ್ಟ್‌ಗಳನ್ನು ಬಹುಮಾನವಾಗಿ ಪಡೆದರು.

ಓಎಸ್‌ಬಿಬಿ ಶಾಲೆ, ನ್ಯಾಷನಲ್ ಪಬ್ಲಿಕ್ ಶಾಲೆ, ಕುಮಾರನ್ಸ್ ಚಿಲ್ಡ್ರನ್ ಹೋಮ್, ಹೆಬ್ಬಾಳದ ವಿದ್ಯಾನಿಕೇತನ್ ಪ್ರೌಢಶಾಲೆಯ ತಲಾ ಇಬ್ಬರು ವಿದ್ಯಾರ್ಥಿಗಳು ಅಂತಿಮ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ಕ್ವಿಜ್ ಮಾಸ್ಟರ್ ಗಿರಿ ಬಾಲಸುಬ್ರಹ್ಮಣ್ಯ, ಟಿಸಿಎಸ್ ಅಧಿಕಾರಿಗಳಾದ ನರೇಂದ್ರ, ಸತೀಶ್ ಚಂದ್ರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.